



# ಅದ್ಭುತ ರುಚಿಯ ಮಿರಾಕಲ್ ಫ್ರೂಟ್

**ಹುಳಿ–ಸಿಹಿ ಮಿಶ್ರಣದ ಮಿರಾಕಲ್ ಫ್ರೂಟ್ ಮೂಲ ಪಶ್ಚಿಮ ಆಫ್ರಿಕಾ. ಹಣ್ಣು ತಿಂದ ಮೇಲೆ 'ಸಿಹಿ ಪವಾಡ' ತೋರಿಸುವ ಇದು ಆರೋಗ್ಯಕ್ಕೆ ಪೂರಕ.**

■ **ಉಮಾ ವೇಣೂರು**

ಅದು ಥರಾವರಿ ಹಣ್ಣುಗಳ ತೋಟ. ವಿಧ ವಿಧದ ಜಂಬುನೇರಳೆ, ಪೇರಳೆ, ಅನಾನಸ್, ಮಾವು, ಪಪ್ಪಾಯಿ, ಸಪೋಟ, ಹಲಸು ಸಮೃದ್ಧವಾಗಿರುವ ತೋಟದಲ್ಲಿ ಸುತ್ತಾಡುತ್ತಿರುವಾಗ, ಸಾವಯವ ಕೃಷಿಕ, ವಿಟ್ಲ ಸಮೀಪದ ಕೊಡುಂಗಾಯಿಯಲ್ಲಿರುವ ಪಿದಮಲೆ ಗೋವಿಂದ ಪ್ರಸಾದ್ ಅವರು ವಿಶೇಷ ಹಣ್ಣಿನ ಗಿಡದತ್ತ ಕರೆದುಕೊಂಡು ಹೋದರು. ಚಿಕ್ಕ ಗಿಡದ ತುಂಬಾ ಬಿಟ್ಟಿದ್ದ ಕೆಂಪು ಬಣ್ಣದ ಹಣ್ಣುಗಳನ್ನು ಕಿತ್ತುಕೊಟ್ಟರು.

ಸಿಹಿ ಹುಳಿ ರುಚಿಯ ಹಣ್ಣು ತಿನ್ನಲು ಖುಷಿಕೊಟ್ಟಿತು. ನಂತರ ಸ್ಟಾರ್ ಫ್ರೂಟ್ ಒಂದನ್ನು ತಿನ್ನಲು ಕೊಟ್ಟರು. ಅದನ್ನು ತಿಂದಾಗ ಅಚ್ಚರಿ ಕಾದಿತ್ತು. ಆ ಸ್ಟಾರ್ ಫ್ರೂಟ್ (ಜಂಬು ನೇರಳೆಯ ಒಂದು ವಿಧ) ಅನ್ನು ಹಿಂದೆ ಅನೇಕ ಬಾರಿ ತಿಂದಿದ್ದರೂ ಬರೀ ಹುಳಿ ರುಚಿಯನ್ನೇ ಅನುಭವಿಸಿದ್ದೆ. ಆದರೆ ಈ ಕೆಂಪು ಹಣ್ಣು ತಿಂದ ಬಳಿಕ ಸ್ಟಾರ್ ಫ್ರೂಟ್ ತಿಂದಾಗ ಸಿಹಿರುಚಿ ಕೊಟ್ಟಿತ್ತು. ಆಗ ಗೋವಿಂದ ಪ್ರಸಾದ್ ಅವರು ಹೇಳಿದ್ದಿಷ್ಟು:

''ಪುಟ್ಟ ಗಿಡದ ತುಂಬ ಬಿಟ್ಟಿರುವ ಕೆಂಪು ಹಣ್ಣು 'ಮಿರಾಕಲ್ ಫ್ರೂಟ್'. ಇದರ ಗುಣವೇ ವಿಶೇಷ. ಪವಾಡ ಹಣ್ಣು ಎಂದೂ ಕರೆಯಲಾಗುವ ಇದನ್ನು ತಿಂದ ಬಳಿಕ ಏನೇ ತಿಂದರೂ ಅದು ಸಿಹಿರುಚಿಯನ್ನೇ ಕೊಡುತ್ತದೆ. ಇದು ವಿದೇಶಿ ಮೂಲದ ಹಣ್ಣು. ನಮ್ಮ ಫಾರ್ಮ್‌ಗೆ ಗಿಡ ತಂದು ಎರಡು ವರ್ಷಕ್ಕೇ ಯಥೇಚ್ಛವಾಗಿ ಹಣ್ಣು ಕೊಡುತ್ತಿದೆ''.



ಅದ್ಭುತ ರುಚಿಯ ಮಿರಾಕಲ್ ಫ್ರೂಟ್ ಪಶ್ಚಿಮ ಆಫ್ರಿಕಾ ಮೂಲದ ನಿತ್ಯಹರಿದ್ವರ್ಣದ ಪೊದೆ ಸಸ್ಯ. ಸಪೋಟೇಸಿ (Sapotaceae) ಕುಟುಂಬಕ್ಕೆ ಸೇರಿದ ಈ ಸಸ್ಯದ ವೈಜ್ಞಾನಿಕ ಹೆಸರು ಸಿನ್ಸೆಪಾಲಮ್ ಡಲ್ಸಿಫಿಕಮ್ (**Synsepalum dulcificum**). ಕಡುಕೆಂಪು ಬಣ್ಣದ ಚೆನ್ನಾಗಿ ಕಳಿತ ಹಣ್ಣು ನಸು ಹುಳಿ ಮಿಶ್ರಿತ ಸಿಹಿರುಚಿಯನ್ನು ಕೊಡುತ್ತದೆ.

ಈ ಹಣ್ಣನ್ನು ಪಾಮ್ ವೈನ್ ಮತ್ತು ಇತರ ತಂಪು ಪಾನೀಯ ಮಾಡಲು ಬಳಸಲಾಗುತ್ತದೆ. ಭಾರತದಲ್ಲೂ ಈಗೀಗ ಬೆಳೆಯಲಾಗುತ್ತಿದೆ. ಹುಳಿ ಪದಾರ್ಥ, ಹಣ್ಣು ಅಥವಾ ಯಾವುದೇ ಆಹಾರವನ್ನು ಈ ಹಣ್ಣು ತಿಂದ ಮೇಲೆ ತಿಂದರೆ ನಾಲಿಗೆಯಲ್ಲಿ ಸಿಹಿ ಅಂಶವೇ ಮೇಲ್ಪಂಕ್ತಿ ಹಾಕುವ ಕಾರಣ 'ಪವಾಡ ಹಣ್ಣು' ಎನ್ನಲಾಗುತ್ತದೆ. ಸಣ್ಣ ಸಣ್ಣ ಬಿಳಿ ಹೂವುಗಳನ್ನು ಬಿಡುವ ಈ ಗಿಡದಲ್ಲಿ ಕೆಂಪು ಬಣ್ಣದ ಅಂಡಾಕಾರದ ಹಣ್ಣುಗಳು ಬಿಡುತ್ತವೆ. ಪೊದೆಸಸ್ಯ ಅಥವಾ ಸಣ್ಣ ಮರವಾಗಿ ಸುಮಾರು 6 ಮೀಟರ್ ಎತ್ತರ ಬೆಳೆದು ಹಲವು ಕೊಂಬೆಗಳನ್ನು ಬಿಡುತ್ತದೆ.

## ಸಿಹಿಗೆ ಕಾರಣವೇನು?

ಈ ಹಣ್ಣು ತಿಂದ ಬಳಿಕ ಇತರ ಯಾವುದೇ ಆಹಾರ ತಿಂದರೂ ಸಿಹಿರುಚಿ ಕೊಡುವುದಕ್ಕೆ ವೈಜ್ಞಾನಿಕ ಕಾರಣಗಳಿವೆ. ಈ ಹಣ್ಣಿನ ರಸದಲ್ಲಿ ನಾಲಿಗೆಯ ರುಚಿಮೊಗ್ಗುಗಳನ್ನು ಪ್ರಚೋದಿಸುವ ಗುಣ ಇದೆ. ಇದರಲ್ಲಿ ಉತ್ಪತ್ತಿಯಾಗುವ ರಾಸಾಯನಿಕವು ಇತರ ಆಹಾರಗಳಿಗೆ ಸಿಹಿ ರುಚಿ ಕೊಡುತ್ತದೆ. ಈ ರಾಸಾಯನಿಕಕ್ಕೆ ಮಿರಾಕ್ಯುಲಿನ್ ಎಂದು ಹೆಸರು. ಈ ರಾಸಾಯನಿಕ ಲಾಲಾರಸದೊಂದಿಗೆ ಸೇರಿದಾಗ ರುಚಿಯಲ್ಲಿ ಪರಿವರ್ತನೆಯಾಗುತ್ತದೆ. ಇದೇ ಮಿರಾಕಲ್ ಫ್ರೂಟ್‌ನ ಪವಾಡದ ರಹಸ್ಯ.

ಪ್ರತಿಕ್ರಿಯಿಸಿ: **feedback@sudha.co.in**


